# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು–570 006

ಆಡಳಿತ ವಿಭಾಗ

ಸಂಖ್ಯೆ: ಕರಾಮುವಿ/ಆವಿ/ಜಿಎಲ್–2/687/2022–23

ದಿನಾಂಕ: 28–02–2023

## ಸುತ್ತೋಲೆ

ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರು ಗಣಕಯಂತ್ರ / ಕಂಪ್ಯೂಟರ್ ತರಬೇತಿ ಪಡೆದಿರುವ ಪ್ರಮಾಣ ಪತ್ರ ಸಲ್ಲಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಅಧೀನ ಕಾರ್ಯದರ್ಶಿರವರ ಪತ್ರ ಸಂಖ್ಯೆ: DPAR 13 SCR 2022, ದಿನಾಂಕ: 05–05–2022

2) ಸರ್ಕಾರದ ಅಧೀನ ಕಾರ್ಯದರ್ಶಿರವರ ಪತ್ರ ಸಂಖ್ಯೆ: DPAR 136 SCR 2022, ದಿನಾಂಕ: 17–02–2023

3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24–02–2023.

* * * * *

ಮೇಲಿನ ವಿಷಯ ಹಾಗೂ ಉಲ್ಲೇಖ (1) ಮತ್ತು (2)ಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಬೋಧಕ / ಬೋಧಕೇತರ ಸಿಬ್ಬಂದಿ ವರ್ಗದವರು ಕೆ.ಸಿ.ಎಸ್.ಆರ್. ನಿಯಮದ ಪ್ರಕಾರ ವಾರ್ಷಿಕ ವೇತನ ಬಡ್ತಿ ಹಾಗೂ ಪದೋನ್ನತಿ ಪಡೆಯಲು ಕಡ್ಡಾಯವಾಗಿ ಗಣಕಯಂತ್ರ / ಕಂಪ್ಯೂಟರ್ ತರಬೇತಿಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಪ್ರಮಾಣ ಪತ್ರವನ್ನು ಪಡೆದು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗಕ್ಕೆ ಸಲ್ಲಿಸಲು ತಿಳಿಸಿದೆ. ತರಬೇತಿಯನ್ನು ಪಡೆಯದ ಸಿಬ್ಬಂದಿಗಳು ದಿನಾಂಕ: 31–12–2023ರ ಒಳಗೆ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ (**ಕಛೇರಿ ವೇಳೆ ಹೊರತುಪಡಿಸಿ**) ತರಬೇತಿ ಪಡೆದು ಪ್ರಮಾಣ ಪತ್ರವನ್ನು ತಪ್ಪದೆ ಸಲ್ಲಿಸಬೇಕಾಗಿ ತಿಳಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ('ಡಿ' ದರ್ಜೆ ನೌಕರರನ್ನು ಹೊರತುಪಡಿಸಿ) ಕಾಲಿಕ ವೇತನ ಶ್ರೇಣಿ/ತಾತ್ಕಾಲಿಕ ಹಾಗೂ ಇತರೆ ನೌಕರರುಗಳು ಸಹ ಗಣಕಯಂತ್ರ / ಕಂಪ್ಯೂಟರ್ ತರಬೇತಿಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ (**ಕಛೇರಿ ವೇಳೆ ಹೊರತುಪಡಿಸಿ**) ತರಬೇತಿ ಪಡೆದು ಪ್ರಮಾಣ ಪತ್ರವನ್ನು ಸಲ್ಲಿಸಲು ತಿಳಿಸಲಾಗಿದೆ. ಪ್ರಮಾಣ ಪತ್ರ ಸಲ್ಲಿಸದೆ ಇರುವ ಸಿಬ್ಬಂದಿಗಳ ವೇತವನ್ನು ತಡೆಹಿಡಿಯಲಾಗುವುದು.

**ವಿಶೇಷ ಸೂಚನೆ:** 'ಡಿ' ದರ್ಜೆ ನೌಕರರನ್ನು ಹೊರತುಪಡಿಸಿ, ದಿನಾಂಕ: 31–12–2023ರ ಒಳಗೆ ಗಣಕಯಂತ್ರ / ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರ ಸಲ್ಲಿಸದ ಖಾಯಂ ಸಿಬ್ಬಂದಿ ವರ್ಗದವರಿಗೆ ವೇತನ ಬಡ್ತಿ ಹಾಗೂ ಪದೋನ್ನತಿಯನ್ನು ತಡೆಹಿಡಿಯಲಾಗುವುದು ಎಂದು ತಿಳಿಸಲಾಗಿದೆ.

03/03/2023

ಕುಲಸಚಿವ

28-02-2023

ಗೆ,

1) ವಿ.ವಿ.ನಿಲಯದ ಎಲ್ಲಾ ಬೋಧಕ/ಬೋಧಕೇತರ/ಕಾ.ವೇ.ಶ್ರೇ/ತಾತ್ಕಾಲಿಕ ನೌಕರರು, ಕರಾಮುವಿ, ಮೈಸೂರು.
2) ವಿ.ವಿ.ನಿಲಯದ ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು/ಸಿಬ್ಬಂದಿಗಳು, ಕರಾಮುವಿ, ಮೈಸೂರು.

ಪ್ರತಿ:

1) ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು
2) ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು
3) ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು
4) ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು
5) ಸಂಯೋಜನಾಧಿಕಾರಿಗಳು, ನ್ಯಾಕ್ ಘಟಕ / ಪ್ರಸಾರಂಗ / ಪಿಎಂಇಬಿ, ಕರಾಮುವಿ, ಮೈಸೂರು
6) ಡಾ. ನವೀನ್ ಕುಮಾರ್ ಸಿ.ಜಿ., ವೆಬ್‌ಸೈಟ್ ನೋಡಲ್ ಅಧಿಕಾರಿ, ಕರಾಮುವಿ, ಮೈಸೂರು, ಈ ಪ್ರಕಟಣೆಯನ್ನು ವಿ.ವಿ.ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
7) ಎಲ್ಲಾ ವಿಭಾಗದ ಉಪಕುಲಸಚಿವರು / ಸಹಾಯಕ ಕುಲಸಚಿವರು / ಅಧೀಕ್ಷಕರು – ಎಲ್ಲಾ ನೌಕರರ ಗಮನಕ್ಕೆ ತರುವುದು.
8) ಕಛೇರಿ ಪ್ರತಿ.